ಮೂಲ ದಾವಾ ಸಂಖ್ಯೆ. 127/2017- ಡಿ ಡಬ್ಲ್ಯೂ 1

(ದಿನಾಂಕ 16-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀ ಏ.ಕೆ . ವಕೀಲರಿಂದಃ-

ದಾವಾ ಆ ಸ್ತಿಯು ಮೂಲತಃ ಹುಗ್ಗಣ್ಣನವರ ಹುಲುಗಪ್ಪ ಇವರಿಗೆ ಸೇರಿದ್ದಿರುತ್ತದೆ. ಹುಲುಗಪ್ಪ ಇವರ ಹೆಂಡತಿಯ ಹೆಸರು ಕರಿಯಮ್ಮ. ಅವರಿಗೆ ಯಾವುದೇ ಸಂತಾನ ಇರುವುದಿಲ್ಲ. ಹುಗ್ಗಣ್ಣನವರ ಹನುಮವ್ವ ನನಗೆ ಗೊತ್ತಿರುವುದಿಲ್ಲ. ಹುಗ್ಗಣ್ಣನವರ ಸಣ್ಣ ಕರಿಯಪ್ಪ ನನಗೆ ಗೊತ್ತಿರುವುದಿಲ್ಲ. ಸದರಿ ಹುಲುಗಪ್ಪ ಇವರು ಈ ಆಸ್ತಿಯನ್ನು ಯಾರಿಗಾದರೂ ಬರೆದು ಕೊಟ್ಟಿದ್ದಾರ ಎಂದರೆ ಸಾಕ್ಷಿಯು ನಮಗೆ ಬರೆದುಕೊಟ್ಟಿದ್ದಾರೆ ಎನ್ನುತ್ತಾರೆ. ಹುಲುಗಪ್ಪ ಯಾವ ದಾಖಲೆಯನ್ನು ನಿಮ್ಮ ಹೆಸರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಉತ್ತರಿಸಿರುವುದಿಲ್ಲ. ಸರ್ವೆ ನಂ 107/ಸಿ 3 ಎಕರೆ 40 ಸೆಂಟ್ಸ ಜಮೀನು ಬರೆದುಕೊಟ್ಟಿರುತ್ತಾರೆ. ಹುಲುಗಪ್ಪನ ಹೆಸರಿನಲ್ಲಿ ಸದರಿ ಜಮೀನು ದಾಖಲಿದ್ದ ಬಗ್ಗೆ ಯಾವ ದಾಖಲೆ ನೋಡಿದ್ದೀರಿ ಎಂದರೆ ನನಗೆ ಗೊತಿಲ್ಲ. ನಮ್ಮ ಕುಟುಂಬದ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ತಂದೆಯ ಹೆಸರು ಭರ್ಮಪ್ಪ ತಾಯಿಯ ಹೆಸರು ಭರಮವ್ವ. ಸದರಿ ಆಸ್ತಿಯ ದಾಖಲೆಗಳು ನನ್ನ ತಾಯಿಯ ಹೆಸರಿನಲ್ಲಿ ಇರಲಿಲ್ಲ. ನನ್ನ ತಾಯಿಗೆ ಹೊಳಗುಂದಿ ಗ್ರಾಮಕ್ಕೆ ಕೊಟ್ಟಿದ್ದು ಅವರು ಹುಲುಗಪ್ಪ ಇವರ ಮನೆಯಲ್ಲಿದ್ದರು. ನನ್ನ ತಾಯಿಯ ಗಂಡನ ಮನೆ ಹೊಳಗುಂದಿ ಗ್ರಾಮ ಎಂದರೆ ಸರಿ ಅವರು ಅಲ್ಲೆ ವಾಸವಾಗಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಮದುವೆ ಯಾದ ನಂತರ ಹೊಳಗುಂದಿಯಲ್ಲಿ ವಾಸವಾಗಿರಲಿಲ್ಲ. ನನ್ನ ತಾಯಿಯ ಒಡ ಹುಟ್ಟಿದವರು ನಾಗಪ್ಪ ಮತ್ತು ಹುಲುಗಪ್ಪ. ಹೊಳಗುಂದಿ ಗ್ರಾಮದಲ್ಲಿ ನಮ್ಮ ತಂದೆ ಯವರಿಗೆ ಸೇರಿದ ಯಾವದೇ ಆಸ್ತಿ ಇಲ್ಲ. ನಾಗಪ್ಪ ಮತ್ತು ಹುಲುಗಪ್ಪ ಇವರಿಗೆ ಯಾವುದೇ ಆಸ್ತಿ ಹೋಗಿಲ್ಲ. ಸದರಿಯವರಿಗೆ ಆಸ್ತಿ ಇರುವ ಬಗ್ಗೆ ನನಗೆ ಗೊತ್ತಿಲ್ಲ. ನಿಮ್ಮ ತಾಯಿಗೆ ಆಸ್ತಿ ಹೇಗೆ ಬಂತು ಎಂದರೆ ಅದು ನಮ್ಮ ತಾಯಿಗೆ ಗೊತ್ತು ಎನ್ನುತ್ತಾರೆ. ನನ್ನ ತಾಯಿ ನನಗೆ ಯಾವ ದಾಖಲೆ ಬರೆದು ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿಗೆ ನಾನು ಏಕೈಕ ಮಗ. ನಮ್ಮ ತಾಯಿಗೆ ಯಾವ ಹೆಣ್ಣು ಮಕ್ಕಳು ಇರುವುದಿಲ್ಲ. ನನ್ನ ಹೆಸರಿಗೆ ದಾವಾ ಆಸ್ತಿ ಕುರಿತು ಆದ ಮುಟೇಶನಿಗೆ ಯಾವ ದಾಖಲೆ ಕೊಟ್ಟಿದ್ದೇನೆ ಎಂದು ನನಗೆ ಗೊತ್ತಿಲ್ಲ. ನಾಗೇಂದ್ರಮ್ಮ ನನಗೆ ಸಂಬಂಧಿಕರು ಅಲ್ಲ. ಸರ್ವೆ ನಂ 107/ಸಿ 3.40 ಎಕರೆ ಮತ್ತು 94/ಬಿ 2.55 ಜಮೀನಿನ ಕುರರಿತು ಮುಟೇಶನ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿ. ನಿ.ಪಿ. 16 ದಾಖಲೆ ನಾನು ಮುಟೇಶನಿಗಾಗಿ ನೀಡಿದ ದಾಖಲೆಯಾಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎನ್ನುತ್ತಾರೆ. ನಾನು

ಸಹಿ ಮಾಡುತ್ತೇನೆ ನಿ.ಪಿ ೨೦ ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯಲ್ಲಿ ಸಾಕ್ಷಿಯು ಕೆ. ಕೊಟ್ರಪ್ಪ ಅನ್ನುವ ಸಹಿ ತನ್ನದು ಅಂತ ಒಪ್ಪಿಕೊಂಡಿರುತ್ತಾರೆ. ಸದರಿ ಅರ್ಜಿಯ ಜೊತೆ ನಿ.ಪಿ 18 ರಂತೆ ನಾನು ವಂಶವೃಕ್ಷವನ್ನು ತಾಲುಕು ಕಚೇರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಸರಲ್ಲಿ ದಾವಾ ಆಸ್ತಿ ದಾಖಲಾಗಿ ಸುಮಾರು ೪೦ ವರ್ಷವಾಗಿದೆ. 2 ನೇ ಪ್ರತಿವಾದಿ ನಾಗಮ್ಮ ನನ್ನ ಹೆಂಡತಿ. ನನ್ನ ಹೆಂಡತಿಯ ತವರು ಮನೆ ಚಿಲುಗೋಡು ಗ್ರಾಮ. ನನ್ನ ಹೆಂಡತಿಯ ಹೆಸರಿಗೆ ಯಾವ ಆಸ್ತಿ ಇಲ್ಲ. ಈ ದಾವೆಯ ವಿಚಾರಣೆಯ ಸಮಯದಲ್ಲಿ ದಾವಾ ಆಸ್ತಿಯನ್ನು 2 ನೇ ಪ್ರತಿವಾದಿ ನನ್ನ ಹೆಂಡತಿಯ ಹೆಸರಿಗೆ ನಾನು ದಾನ ಪತ್ರದ ಮೂಲಕ ವರ್ಗಾಯಿಸಿದ್ದೇನೆ ಎಂದರೆ ಸರಿ. ಆ ವಿಚಾರವನ್ನು ನ್ಯಾಯಾಲಯಕ್ಕೆ ನಾನು ತಿಳಿಸಿರುವುದಿಲ್ಲ. ಈ ವಿಚಾರವನ್ನು ನಾನು ನನ್ನ ವಕೀಲರಿಗೂ ಸಹ ತಿಳಿಸಿಲ್ಲ. ದಾವಾ ಜಮೀನು ಮೂಲತಹ ೬.ಎಕರೆ ೮೦.ಸೆಂಟ್ಸ ಜಮೀನು ಸಣ್ಣ ಕರಿಯಪ್ಪ ಇವರಿಗೆ ಸೇರಿದ್ದು ಇತ್ತು ಎಂದರೆ ಸಾಕ್ಷಿಯು ಅದನ್ನು ಅವರು ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ . ಅವರು ಯಾರಿಗೆ ಮಾರಾಟ ಮಾಡಿದ್ದಾರೆ ಎನ್ನುವದು ನನಗೆ ಗೊತ್ತಿಲ್ಲ. ಮೃತವಾದಿ ಯಾರು ಎಂದು ನನಗೆ ಗೊತ್ತಿಲ್ಲ. ವಾದಿ ನನಗೆ ಗೊತ್ತು. ದಾವಾ ಆಸ್ತಿಯನ್ನು ಹನುಮವ್ವ ಇವರು ತನ್ನ ಮಗಳಾದ ಮೃತ ವಾದಿಯ ಹೆಸರಿಗೆ ದಿನಾಂಕ 23.05.1961 ರಂದುಎ ವ್ಯವಸ್ಥಾಪಕರ ಮೂಲಕ ವರ್ಗಾಯಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ೬ ಎಕರೆ ೮೦ ಸೆಂಟ್ಸ ಜಮೀನಿನಲ್ಲಿ ಉಳಿದ ೩.ಎಕರೆ ೪೦ ಸೆಂಟ್ಸ ಜಮೀನನು ಸದರಿ ಹನುಮವ್ವ ಇವರು ತನ್ನ ಇನ್ನೊಬ್ಬ ಮಗಳು ಶಾಂತವ್ವ ಇವರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ಶಾಂತವ್ವನ ಮಕ್ಕಳು ಆ ಜಮೀನನ್ನು ಕುರಿ ಶೇಖರಪ್ಪ ಇವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ವಾದಿಯು ಸ್ವಾದೀನ ದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ಹೆಸರಿಗೆ ಬಂದ ಬಗ್ಗೆ ಯಾವ ದಾಖಲೆಯನ್ನು ಹಾಜರುಪಡಿಸಿಲ್ಲ. ಸರ್ವೇ ನಂ ೯೪ ರ ಮುಟೇಶನ್ ಮಾಡಿಸಿಕೊಳ್ಳು ವ ಸಮಯದಲ್ಲಿ ದಾವಾ ಆಸ್ತಿಯನ್ನು ಸೇರಿಸಿಕೊಂಡು ನನ್ನ ಹೆಸರಿಗೆ ಮುಟೇಶನ್ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

೨. ದಾವಾ ಆಸ್ತಿಯ ಚೆಕ್ ಬಂದಿ ಪೂರ್ವಕ್ಕೆ ಕೊಟ್ರೇಶ, ಪಶ್ಚಿಮಕೆ ಇನ್ನೊಬ್ಬ ಕೊಟ್ರೇಶ, ಉತ್ತರಕ್ಕೆ ಮೈಲಮ್ಮ, ದಕ್ಷಿಣಕ್ಕೆ ಮಂಜಪ್ಪ ಇವರ ಜಮೀನುಗಳು ಇರುತ್ತವೆ. ನಮ್ಮ ಜಮೀನಿನ ಪೂರ್ವ ದಿಕ್ಕಿಗೆ ಕುರಿ ಶೇಖರಪ್ಪ ಇವರ ಜಮೀನು ಬರುತ್ತದೆ. ದಾವಾ ಆ ಸ್ತಿಯನ್ನು ಅವರ ತಾಯಿಯ ನಂತರ ಅವನೆ ಸ್ವಾದೀನ ದಲ್ಲಿ ರುತ್ತಾನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾವು ಅತಿಕ್ರಮಣ ಪ್ರವೇಶ ಮಾಡಿ ಅವನ ಸ್ವಾದೀನಕ್ಕೆ ಅಡ್ಡಿ ಪಡಿಸಿರುತ್ತೇವೆ ಎಂದರೆ ಸರಿಯಲ್ಲ . ನನ್ನ ಹೆಂಡತಿ ಹೆಸರಿಗೆ ಮಾಡಿದ ದಾನ ಪತ್ರದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ನನ್ನ ಹೆಂಡತಿ ಅನ್ಯೋನ್ಯವಾಗಿ ಚೆನ್ನಾಗಿ ಇರುತ್ತೇವೆ. ನನ್ನ ಹೆಂಡತಿ ಈ ದಾವೆಯಲ್ಲಿ ತನ್ನ ತಕರಾರು ಸಲ್ಲಿಸಿದ್ದಾಳೆ. ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು

ಅಧಿಕಾರ ಸ್ವಾಧೀನ ಇರುವುದಿಲ್ಲ  ಎಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ಹೆಸರಿನಲ್ಲಿ ಇದೆ ಎನ್ನುವ ಕಾರಣಕ್ಕೆ ನಾನು  ಬ್ಯಾಂಕ್ ನಲ್ಲಿ ಸಾಲ ಪಡೆದಿದ್ದೇನೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ವಾದಿಗೆ ಹಕ್ಕು ಅಧಿಕಾರ ಸ್ವಾದೀನ ಇದ್ದು ನನಗೆ ದಾವಾ ಆಸ್ತಿಯಲ್ಲಿ ಯಾವುದೆ  ಹಕ್ಕು ಅಧಿಕಾರ ಸ್ವಾದೀನ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಕರಾರು ಮತ್ತು ಮುಖ್ಯ ವಿಚಾರಣೆ ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ಸಾಕ್ಷಿಗೆ ಸಾಕ್ಷಿ ಪ್ರಮಾಣ ಪತ್ರ ತೋರಿಸಿ ಅದನ್ನು ಬರೆಯಲು ಯಾರು ಮಾಹಿತಿ ಕೊಟ್ಟರು ಎಂದರೆ ಸಾಕ್ಷಿಯು ಮೌನವಾಗಿ ನಿಂತಿರುತ್ತಾರೆ. ದಾವಾ ಆಸ್ತಿಯಲ್ಲಿ ನನಗೆ ಯಾವದೇ ಹಕ್ಕು ಇಲ್ಲದಿದ್ದರೂ ಸಹ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ